# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :15/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪುಟ್ಟಮಾದಶೆಟ್ಟಿ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಪುಟ್ಟಶೆಟ್ಟಿ | **05.12.2023** |
| ವಯಸ್ಸು | : | 60 ವರ್ಷ | |
| ವೃತ್ತಿ | : | ವ್ಯವಸಾಯ | ಪಿ.ಡಬ್ಲೂಃ 2 |
| ವಾಸಸ್ಥಳ | : | ತಗಡೂರು, ನಂಜನಗೂಡು. | ಸಿ.ಡಬ್ಲೂಃ 2 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಸಂಬಂಧಿ ಆಗಬೇಕು. ಫ್ರಾಸಾ 1 ನನ್ನ ಮಗ. ಚಾಸಾ 3 ನನ್ನ ಸಂಬಂಧಿ. 3 ವರ್ಷ 5 ತಿಂಗಳ ಹಿಂದೆ ನಾನು ಹಾಗೂ ಚಾಸಾ 3 ತಗಡೂರಿನಲ್ಲಿರುವ ವನಜಾಕ್ಷಿಯವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆವು. ಮಧ್ಯಾಹ್ನ 1 ಅಥವಾ 1.30 ಗಂಟೆ ಸಮಯದಲ್ಲಿ ನನ್ನ ಮಗ ಜಮೀನಿಗೆ ನಮಗೆ ಊಟ ತೆಗೆದುಕೊಂಡು ಬಂದಿದ್ದ. ನಾವು ಊಟ ಮಾಡುತ್ತಿದ್ದೆವು ಆಗ, ನ್ಯಾಯಾಲಯ ಮುಂದಿರುವ ಆರೋಪಿ ಬಂದು ನನ್ನ ಮಗನನ್ನು ಬಾಳೆಯ ತೋಟಕ್ಕೆ ಕರೆದುಕೊಂಡು ಹೋದ. ಊಟ ಮಾಡಿಕೊಂಡು ಬರುತ್ತಿರುವಾಗ ನಮಗೆ ಗಲಾಟೆಯ ಶಬ್ದ ಕೇಳಿ ಗೊತ್ತಾಯಿತು. ನಾನು ನೋಡಿದಾಗ ಫ್ರಾಸಾ 1 ತಲೆ , ಕಿವಿಯ ಗೆಳಗಡೆ ಗಾಯಗಳಾಗಿ ಬಿದ್ದಿದ್ದ. ಆರೋಪಿ ಫ್ರಾಸಾ 1 ರವರಿಗೆ ಹೊಡೆದುಬಿಟ್ಟು ಓಡಿ ಹೋದ. ನಾನು ಗಾಯಗೊಂಡ ನನ್ನ ಮಗನನ್ನು ನಂಜನಗೂಡು ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಬಂದೆ. ಅಲ್ಲಿಂದ ಅಂಬೂಲೆನ್ಸ ನಲ್ಲಿ ನನ್ನ ಮಗನನ್ನು ಮೈಸೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆ. ಆರೋಪಿಯ ಹೆಂಡತಿಯೊಂದಿಗೆ ನನ್ನ ಮಗನ ಸಂಬಂಧ ಇದೆ ಎನ್ನುವ ಕಾರಣಕ್ಕಾಗಿ ಗಲಾಟೆ ಮಾಡಿ

ಹೊಡೆದಿದ್ದ ಎಂದು ನನ್ನ ಮಗ ಹೇಳಿದ್ದರಿಂದ ಗೊತ್ತಾಯಿತು. ನನ್ನ ಮಗನಿಗೆ ಮಚ್ಚಿನಲ್ಲಿ ಹೊಡೆದಿರಬಹುದು. ಓಡಿ ಹೋಗುತ್ತಿರುವ ಆರೋಪಿಯ ಕೈಯಲ್ಲಿ ಏನು ಇತ್ತು ಎಂದು ನಾನು ಗಾಭರಿಯಲ್ಲಿ ಗಮನಿಸಿಲ್ಲ. ಪ್ರಾಸಾ 1 ಮತ್ತು ಹೆಂಡತಿಯ ಮಧ್ಯೆ ಇರುವ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ.

2. ಮಗನನ್ನು ಆಸ್ಪತ್ರೆಗೆ ಸೇರಿಸಿದ ಮರುದಿನ ಪೊಲೀಸರು ತೋಟಕ್ಕೆ ಬಂದಿದ್ದರು. ಪೊಲೀಸರು ಬಂದಾಗ ನಾನು ಒಬ್ಬನೇ ಇದ್ದೆ ನಂತರ ಗ್ರಾಮಸ್ಥರು ಬಂದರು. ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ ಸ್ಥಳ ದಿಂದ ಮಣ್ಣು ಹಾಗೂ ರಕ್ತ ಹತ್ತಿದ ಮಣ್ಣನ್ನು ಡಬ್ಬಿಯಲ್ಲಿ ಹಾಕಿ ವಶಕ್ಕೆ ಪಡೆದುಕೊಂಡು. (ಸಾಕ್ಷಿಗೆ 2 ಡಬ್ಬಿಗಳನ್ನು ತೋರಿಸುವ ಸಲುವಾಗಿ ತೆರೆದ ನ್ಯಾಯಾಲಯದಲ್ಲಿ ಸೀಲ್ ಕವರ್ ನ್ನು ತೆಗೆಯಲಾಯಿತು.) ರಕ್ತ ಹತ್ತಿದ ಮಣ್ಣನ್ನು ಮು. ಮಾ. 3 ಎಂದು ಸಾದಾ ಮಣ್ಣನ್ನು ಮು. ಮಾ. 4 ಎಂದು ಗುರುತಿಸಲಾಯಿತು. ಬೆಳಿಗ್ಗೆ 1.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಪಂಚನಾಮೆಯನ್ನು ಪೊಲೀಸರು ಜರುಗಿಸಿದರು. ನಾನೇ ಪೊಲೀಸರಿಗೆ ಗಲಾಟೆಯ ಸ್ಥಳವನ್ನು ತೋರಿಸಿದೆ. ಪೊಲೀಸರು ತಯಾರಿಸಿದ ಪಂಚನಾಮೆಗೆ ಚಾಸಾ 4 ಮತ್ತು 5 ಸಹಿ ಮಾಡಿದ್ದಾರೆ. ನಾನು ಹೆಬ್ಬೆಟ್ಟಿನ ಗುರುತನ್ನು ಮಾಡಿದ್ದೇನೆ. ಪಂಚನಾಮೆಯನ್ನು ನಿಪಿ. 4 ಎಂದು ಗುರುತಿಸಲಾಯಿತು.

3. ಪೊಲೀಸರು ನನ್ನನ್ನು ಘಟನೆಯ ಬಗ್ಗೆ ಕೇಳಿದಾಗ ನಾನು ಹೇಳಿಕೆ ಕೊಟ್ಟಿದ್ದೇನೆ. ಈ ಘಟನೆಯ ಬಗ್ಗೆ ಪೊಲೀಸರನ್ನು ಹೊರತುಪಡಿಸಿ ಬೇರೆ ಯಾರಿಗೂ ಹೇಳಿಕೆ ಕೊಟ್ಟಿಲ್ಲ. ಮು. ಮಾ. 2 ನ್ನು ಆ ದಿನ ಆರೋಪಿ ಧರಿಸಿದ್ದ. ಆರೋಪಿ ಓಡಿ ಹೋಗುತ್ತಿರುವಾಗ ನೋಡಿದ್ದೆ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು**

**ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದ**

4. ಗಲಾಟೆ ಶಬ್ದ ಕೇಳಿ ನಾವು ಬರುತ್ತಿರುವಾಗ ಆರೋಪಿ ತನ್ನ ಹೆಲ್ಮೆಟ್ ಹಿಡಿದು ಕೊಂಡು ಓಡಿ ಹೋದ ಎಂದರೆ ನಿಜ. ನಾವು ಬಂದಾಗ ಫ್ರಾಸಾ 1 ಮೈತುಂಬ ರಕ್ತ ಆಗಿ ಬಿದ್ದಿದ್ದ ಎಂದರೆ ನಿಜ. ಘಟನೆ ಆದ 2 ತಿಂಗಳು 3 ದಿನದ ನಂತರ ನಾನು ನ್ಯಾಯೂಧಿಶರ ಮುಂದೆ ವಿಸಿಯಲ್ಲಿ ಘಟನೆಯ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ನಿಜ. ಆ ಹೇಳಿಕೆಗೂ ನನ್ನ ಹೆಬ್ಬೆಟ್ಟಿನ್ನ ಗುರುತು ಹಾಕಿದ್ದೇನೆ ಎಂದರೆ ನಿಜ. ಹೇಳಿಕೆ ನಿಪಿ. 5 ಎಂದು ಗುರುತಿಸಲಾಯಿತು. ಪೊಲೀಸರು ಪಂಚನಾಮೆಗೆ ಬಂದಾಗ ನನಗೆ ನೋಟೀಸ್ ಕೊಟ್ಟು ನನ್ನ ಹೆಬ್ಬೆಟ್ಟಿನ ಗುರುತಿನ ಸಹಿ ಪಡೆದಿದ್ದರು ಎಂದರೆ ನಿಜ. ಅದನ್ನು ನಿಪಿ. 6 ಎಂದು ಗುರುತಿಸಲಾಯಿತು. ಪಂಚನಾಮೆ ಯನ್ನು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 12.15 ಗಂಟೆಯವರೆಗೆ ಬರೆದರು ಎಂದರೆ ನಿಜ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಎಮ್ ಎನ್ ರವರಿಂದಃ**

5. ನಾನೇ ಫ್ರಾಸಾ 1 ರವರನ್ನು ಆಸ್ಪತ್ರೆಗೆ ಸೇರಿಸಿದ್ದೆ. ವೈದ್ಯರಿಗೆ ನಾನು ಫ್ರಾಸಾ 1 ರವರಿಗೆ ಹೊಡೆದಿದ್ದಾರೆ ಎಂದು ಹೇಳಿದ್ದೆ, ಯಾರು ಹೋಡೆದಿದ್ದಾರೆ ಎಂದು ಹೇಳಿರಲಿಲ್ಲ. ಆ ಸಮಯದಲ್ಲಿ ನನಗೆ ಗೊತ್ತಿರಲಿಲ್ಲ. ಮಗನನ್ನು ಮೈಸೂರಿಗೆ ಕರೆದುಕೊಂಡು ಬಂದಾಗ ಸಂಜೆ 7.30 ಅಥವಾ 8.00 ಗಂಟೆ ಆಗಿತ್ತು. ನಾನು ನನ್ನ ಮಗನನ್ನು ಆಸ್ಪತ್ರೆಗೆ ದಾಖಲು ಮಾಡಿ ಮೈಸೂರಿನಲ್ಲಿಯೆ ಉಳಿದುಕೊಂಡೆ. ಮರುದಿನ ಬೆಳಿಗ್ಗೆ ನಮ್ಮ ಊರಿಗೆ ಹೋದೆ. ಆಗ ನನ್ನ

ಮಗನಿಗೆ ಐಸಿಯು ನಲ್ಲಿ ಹಾಕಿದ್ದರಿಂದ ನಾನು ಗ್ರಾಮಕ್ಕೆ ಬಂದೆ. ನನ್ನ ಮಗನನ್ನು ದಾಖಲು ಮಾಡಿದ್ದಾಗಿನಿಂದ ನಾನು ಗ್ರಾಮಕ್ಕೆ ಬರುವವರಗೆ ಅವನು ಐಸಿಯುನಲ್ಲಿಯೇ ಇದ್ದ. ಮೈಸೂರಿನ ಆಸ್ಪತ್ರೆಯಲ್ಲಿ ಫ್ರಾಸಾ 1 ರವರ ಹೆಂಡತಿ ಇದ್ದರು. ಮಧ್ಯಾಹ್ನದ ನಂತರ ಪುನಃ ನಾನು ಮೈಸೂರಿಗೆ ಬಂದೆ. ಪೊಲೀಸರು ತಗಡೂರಿನ ನಮ್ಮ ಮನೆಯಿಂದ ಜಮೀನಿಗೆ ಕರೆದುಕೊಂಡು ಹೋಗಿದ್ದರು. ನಿಪಿ. 4 ರ ಮೇಲೆ ನನ್ನ ಹೆಬ್ಬೆಟ್ಟಿನ ಗುರುತು ಹಾಕುವ ಪೂರ್ವ ದಲ್ಲಿ ಓದಿ ಹೇಳಿಲ್ಲ. ಆ ಹೆಬ್ಬೆಟ್ಟಿನ ಗುರುತನ್ನು ಜೀಪಿನ ಹತ್ತಿರ ಪಡೆದಿದ್ದಾರೆ. ಜೀಪ್ ತೋಟದ ಒಳಗೆ ಇತ್ತು. ಸ್ಥಳ ದಿಂದ ಜೀಪ್ 100 ಅಡಿ ಅಂತರದಲ್ಲಿ ಇತ್ತು. ಪಂಚನಾಮೆಯ ದಿನವೇ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದಾರೆ. ಆ ನಂತರ ನನ್ನನ್ನು ವಿಚಾರಣೆ ಮಾಡಿಲ್ಲ. ಪೊಲೀಸರು ಮಣ್ಣನ್ನು ಜಪ್ತು ಮಾಡಿಕೊಂಡ ನಂತರ ಮಚ್ಚನ್ನು ತರೆಸಿಕೊಂಡರು.

6.ಪೊಲೀಸರ ಮುಂದಿನ ಹೇಳಿಕೆಯಲ್ಲಿ ಆರೋಪಿ ಹೊಡೆದು ಓಡಿ ಹೋಗುತ್ತಿದ್ದ ಎಂದು ಹೇಳಿದ್ದಿಯಾ ಹಾಗೂ ನ್ಯಾಯಾಧೀಶರ ಮುಂದಿನ ಹೇಳಿಕೆಯಲ್ಲಿ ಓಡಿ ಹೋಗಿ ಬಿಟ್ಟಿದ್ದ ಎಂದು ಹೇಳಿದ್ದೀಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ಸ್ಥಳಕ್ಕೆ ಓಡಿ ಹೋಗುತ್ತಿದ್ದಾಗ ಆರೋಪಿ ಓಡಿ ಹೋಗುತ್ತಿದ್ದ ಎಂದು ಹೇಳುತ್ತಾರೆ. ಪೊಲೀಸರು ಮಣ್ಣು ಹಾಗೂ ಮಚ್ಚು ತೆಗೆದುಕೊಂಡು ಹೋದ ನಂತರ ಪುನಃ ಜಮೀನಿಗೆ ಬಂದಿಲ್ಲ.

7. ಘಟನೆ ನಡೆದಾಗ ಬಾಳೆ ಗೊಣೆ ಖರೀದಿಸುವ ಬಗ್ಗೆ ವ್ಯವಹಾರ ಆಗಿರಲಿಲ್ಲ. ಬಾಳೆ ಗೊಣೆ ವ್ಯವಹಾರವನ್ನೆಲ್ಲಾ ಫ್ರಾಸಾ 1 ರವರೇ ಮಾಡುತ್ತಿದ್ದ. ಬಾಳೆ ಗೊಣೆಯ ವ್ಯವಹಾರದ ವಿಷಯದಲ್ಲಿ ಫ್ರಾಸಾ 1 ಹಲವಾರು ಜನರೊಂದಿಗೆ ಗಲಾಟೆ ಮಾಡಿಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ವ್ಯವಹಾರದ ವಿಷಯದಲ್ಲಿ ಬೇರೆ ಯಾರೋ ಫ್ರಾಸಾ 1 ರವರಿಗೆ ಹೊಡೆದಿದ್ದರು ಎಂದರೆ ಸರಿಯಲ್ಲ. ಗಲಾಟೆ ಮಾಡಿದವರು ದೂರು ಸಲ್ಲಿಸಿದರೆ ಪುನಃ ಗಲಾಟೆ

ಮಾಡಬಹುದು ಎಂದು ನಾನು ನನ್ನ ಮಗ ಸೇರಿಕೊಂಡು ಆರೋಪಿಯ ಮೇಲೆ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿ ಜಮೀನಿಗೆ ಬಂದೇ ಇಲ್ಲ ಹಾಗೂ ಫ್ರಾಸಾ 1 ರವರಿಗೆ ಹೊಡೆದೆ ಇಲ್ಲ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಸಾಮಿಲಾಗಿ ನಡೆದ ಘಟನೆ ಮುಚ್ಚಿಡಲು ಸುಳ್ಳು ಪ್ರಕರಣ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.ಫ್ರಾಸಾ 1 ರವರಿಗೆ ಆದಂತಹ ಗಾಯಗಳಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

05.12.2023
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.